# ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳು

ದಿನಾಂಕ : 15.06.2024 ರಂದು ಶನಿವಾರ ಮಧ್ಯಾಹ್ನ 12.00 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಛೇರಿಯಲ್ಲಿ ಆನ್‌ಲೈನ್ (Online) ಮೂಲಕ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳು.

## ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು

| | | |
|---|---|---|
| 1. | ಪ್ರೊ.ಹರೀಶ್ ರಾಮಸ್ವಾಮಿ, ಕುಲಪತಿಗಳು, ರಾವಿರಾ | ಅಧ್ಯಕ್ಷರು |
| 2. | ಡಾ. ಶಿವಬಸಪ್ಪ ಮಾಲೀಪಾಟೀಲ್ | ಸದಸ್ಯರು |
| 3. | ಶ್ರೀ ನಾಗೇಂದ್ರ ಪ್ರಸಾದ ಎ.ಎಂ | ಸದಸ್ಯರು |
| 4. | ಡಾ. ಪಾರ್ವತಿ ಸಿ ಎಸ್, ಉಪಕರಣಾತ್ಮಕ ತಂತ್ರಜ್ಞಾನ ವಿಭಾಗ, ರಾವಿರಾ | ಸದಸ್ಯರು |
| 5. | ಡಾ. ಪಿ ಭಾಸ್ಕರ, ಡೀನರು, ಕಲಾ ನಿಕಾಯ, ರಾವಿರಾ | ಸದಸ್ಯರು |
| 6. | ಡಾ.ಗೊಳ್ಳಿ.ಶಿವಶರಣಪ್ಪ,ಜಂಟಿ ನಿರ್ದೇಶಕರು, ಕಾ.ಶಿ.ಇ, ಪ್ರಾದೇಶಿಕ ಕಛೇರಿ ಕಲಬುರ್ಗಿ | ಸದಸ್ಯರು |
| 7. | ಡಾ. ರಾಘವೇಂದ್ರ ಫತ್ತೇಪೂರ, ನಿರ್ದೇಶಕರು, ಕಾ.ಅ.ಮಂ | ವಿಶೇಷ ಆಹ್ವಾನಿತರು |
| 8. | ಪ್ರೊ.ಎಂ.ಯರಿಸ್ವಾಮಿ, ಕುಲಸಚಿವರು(ಮೌಲ್ಯಮಾಪನ)ರಾವಿರಾ | ಸದಸ್ಯರು |
| 9. | ಪ್ರೊ. ವಿಶ್ವನಾಥ ಎಂ, ಕುಲಸಚಿವರು, ರಾವಿರಾ | ಸದಸ್ಯ ಕಾರ್ಯದರ್ಶಿಗಳು |

ಮೊದಲನೆಯದಾಗಿ ಕುಲಸಚಿವರು, ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಆನ್‌ಲೈನ್ (Online) ಸಭೆಗೆ ಆಗಮಿಸಿದ ಸಿಂಡಿಕೇಟ್ ಸದಸ್ಯರುಗಳನ್ನು ಸ್ವಾಗತಿಸಿ, ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು.

| ಐಟಂ. ನಂ | ವಿಷಯ | ಸಿಂಡಿಕೇಟ್ ನಿರ್ಣಯ |
|---|---|---|
| 01. | ರಾಯಚೂರು ವಿಶ್ವವಿದ್ಯಾಲಯದ 2024-25 ನೇ ಶೈಕ್ಷಣಿಕ ಸಾಲಿನ ಸಂಯೋಜನೆಗಾಗಿ (For Affiliation) ಸ್ನಾತಕ, ಸ್ನಾತಕೋತ್ತರ ಹಾಗೂ ಸ್ನಾತಕೋತ್ತರ ಡಿಪ್ಲೋಮಾ ಕೋರ್ಸಗಳ ಹೊಸ ಕಾಲೇಜು, ಹೊಸ ವಿಷಯ, ಹೊಸ ಕೋರ್ಸ ಪ್ರವೇಶ ಮಿತಿ ಹೆಚ್ಚಳ ಮಂಜೂರಾತಿಗಾಗಿ ಕಾಲೇಜುಗಳು ಆನ್ ಲೈನ್ ಮುಖಾಂತರ ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಿ ತುರ್ತಾಗಿ (Urgent) ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಕಳುಹಿಸಿ ಕೊಡುವ ಕುರಿತು. | ರಾಯಚೂರು ವಿಶ್ವವಿದ್ಯಾಲಯದ 2024-25 ನೇ ಶೈಕ್ಷಣಿಕ ಸಾಲಿನ ಸಂಯೋಜನೆಗಾಗಿ (For Affiliation) ಸ್ನಾತಕ, ಸ್ನಾತಕೋತ್ತರ ಹಾಗೂ ಸ್ನಾತಕೋತ್ತರ ಡಿಪ್ಲೋಮಾ ಕೋರ್ಸಗಳ, ಹೊಸ ವಿಷಯ, ಹೊಸ ಕೋರ್ಸ ಪ್ರವೇಶ PG/BCA/BBA/BSW ಕೋರ್ಸಗಳ ಮಿತಿ ಹೆಚ್ಚಳ ಮಂಜೂರಾತಿಗಾಗಿ ಕಾಲೇಜುಗಳು ಆನ್ ಲೈನ್ ಮುಖಾಂತರ ಸಲ್ಲಿಸಿದ ಅರ್ಜಿಗಳನ್ನು ಸ್ಥಳೀಯ ತನಿಖಾ ಸಮಿತಿ ಸ್ಥಳ ಪರಿಶೀಲನೆ ಮಾಡಿ, ನೀಡಿದ ವರದಿಯನ್ನು ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕರಾದ ಡಾ. ರಾಘವೇಂದ್ರ ಫತೇಪೂರ ಅವರು ಸಭೆಗೆ ಮಂಡಿಸಿದರು. ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಕೂಡಾ ಈ ವಿಷಯವನ್ನು ಚರ್ಚಿಸಿ, ಅನುಮೋದಿಸಲಾಗಿದೆ ಎಂದು ಅವರು ಸಭೆಗೆ ತಿಳಿಸಿದರು. ಸ್ಥಳೀಯ ತನಿಖಾ ಸಮಿತಿ ವರದಿಯಲ್ಲಿ ನೀಡಿದ ಶೀಫಾರಸ್ಸುಗಳಂತೆ **ಈ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿದಂತೆ,** |

**New Course**

| | | | | |
|---|---|---|---|---|
| 1 | 7230 | SRI VENKATESHWARA DEGREE COLLEGE | RAICHUR | New PG Course (MA Economics, Political Science) |
| 2 | 7315 | LOYOLA DEGREE COLLEGE | MANVI | New UG Course (BCA) |
| 3 | 7220 | VIVEKANANADA BCA COLLEGE RAICHUR | RAICHUR | New PG Course (MA Political Science, History) |
| 4 | 7258 | NAVAYUGA MSW COLLEGE | RAICHUR | New PG Course (MA Economics) + New UG Course (BA, Bcom) |
| 5 | 7121 | JMS MSW COLLEGE | DEODURGA | New Course (B.Com) |
| 6 | 8134 | SWAMY VIVEKANAND MSW COLLEGE | SHAHAPUR | New Course (BA, BSc) |
| 7 | 8034 | BILLAV Post Graduate COLLEGE M A HISTORY PG COLLEGE | HUNASAGI | New UG Course (BA Bcom) |

**New Subject**

| | | | | |
|---|---|---|---|---|
| 8 | 7212 | LAXMI VENKATESH DESAI (LVD) COLLEGE | RAICHUR | New Subject (BSc Artificial Intelligence) |
| 9 | 8125 | SNEHA DEGREE COLLEGE | SHAHAPUR | New Subject (Sociology) |

**Increase in Intake**

| | | | | |
|---|---|---|---|---|
| 10 | 7211 | BANKATLAL RAJARAM BOOB COMMERCE DEGREE COLLEGE(BRB) | RAICHUR | Increase in Intake (Mcom) |
| 11 | 7247 | SRI VENKATESHWARA PG COLLEGE | RAICHUR | Increase in Intake (Mcom) |
| 12 | 7229 | PURTIPPALI CHAGAL PARVATHAMMA BASANNA(SERD'S) DEGREE COLLEGE | RAICHUR | Increase in Intake (MCom, MA Economics) |
| 13 | 7233 | VRET P.G COLLEGE, RAICHUR | RAICHUR | Increase in Intake (MA Economics) |
| 14 | 7257 | SUNRISE MCOM COLLEGE | RAICHUR | Increase in Intake (M.Com) |
| 15 | 8017 | MAILARLINGESHWARA POST GRADUATION COLLEGE | RANGAMPET | Increase in Intake (MA English) |

**Freah PA**

| | | | | |
|---|---|---|---|---|
| 16 | 7227 | VIVEKANANDA BPED COLLEGE | RAICHUR | Fresh PA |

ಈ ಎಲ್ಲಾ ವಿಷಯಗಳ ಕುರಿತ 16 ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದು ಎಂದು ಡಾ.ರಾಘವೇಂದ್ರ ಫತೇಪೂರ ಅವರು ಸಿಂಡಿಕೇಟ್ ಸಭೆಗೆ ವಿವರಿಸಿದರು. ಈ ವಿಷಯ ಕುರಿತು ಸಭೆಯಲ್ಲಿ ಕುಲಂಕೂಷವಾಗಿ ಚರ್ಚಿಸಿ, ಸ್ಥಳೀಯ ತನಿಖಾ ಸಮಿತಿ ನೀಡಿರುವ ವರದಿಯನ್ನು ಒಪ್ಪಿಕೊಂಡು ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ಸಭೆಯಲ್ಲಿ ತೀರ್ಮಾನಿಸಿ, ಅನುಮೋದಿಸಲಾಯಿತು.

| | | |
|---|---|---|
| 02. | 2024–25 ನೇ ಶೈಕ್ಷಣಿಕ ಸಾಲಿನಿಂದ ಕರ್ನಾಟಕ ಶಿಕ್ಷಣ ನೀತಿ ಆಯೋಗದ ಮಧ್ಯಂತರ ವರದಿಯ ಅನುಬಂಧ–1 ಮತ್ತು 2ನ್ನು ರಾಯಚೂರು ವಿಶ್ವವಿದ್ಯಾಲಯದಲ್ಲಿ ಸ್ನಾತಕ ಕೋರ್ಸುಗಳಿಗೆ ಅನುಷ್ಠಾನ ಮಾಡುವ ಕುರಿತು. | ರಾಜ್ಯ ಶಿಕ್ಷಣ ನೀತಿ ಆಯೋಗವು ಸರ್ಕಾರಕ್ಕೆ ಸಲ್ಲಿಸಿರುವ ಮಧ್ಯಂತರ ವರದಿಗಳಲ್ಲಿನ ಶಿಫಾರಸ್ಸುಗಳನ್ನು 2024–25 ಶೈಕ್ಷಣಿಕ ಸಾಲಿನಿಂದ ಪದವಿ ಕಾರ್ಯಕ್ರಮಗಳಿಗೆ ಅನುಷ್ಠಾನಗೊಳಿಸಲು ಉದ್ದೇಶಿಸಿ ಸರ್ಕಾರದ ಆದೇಶ ಸಂಖ್ಯೆ: ಇಡಿ 166 ಯುಎನ್‌ಇ 2023, ಬೆಂಗಳೂರು. ದಿನಾಂಕ: 08.05.2024. ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ವಯ ರಾಜ್ಯದಲ್ಲಿ ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ವಿಶ್ವವಿದ್ಯಾಲಯಗಳು ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಪದವಿ ಕಾರ್ಯಕ್ರಮಗಳಿಗೆ 2024–25ನೇ ಶೈಕ್ಷಣಿಕ ವರ್ಷದಿಂದ ಅನುಬಂಧ–1 (ಅನುಷ್ಠಾನದ ಮಾರ್ಗಸೂಚಿಗಳು) ಮತ್ತು ಅನುಬಂಧ–2 (ಪ್ರೋಗ್ರಾಮ್ ವಿನ್ಯಾಸ–Curriculum Structure) ರ ಮಾರ್ಗಸೂಚಿಗಳಿಗನುಸಾರವಾಗಿ ಪದವಿ ಕಾರ್ಯಕ್ರಮಗಳ ಅವಧಿ ಮತ್ತು ಪಠ್ಯಕ್ರಮವನ್ನು ಪರಿಷ್ಕರಿಸಿ ಅನುಷ್ಠಾನಗೊಳಿಸಿ, ಆದೇಶಿಸಲಾಗಿರುವುದನ್ನು ಕುಲಸಚಿವರು ಸಭೆಗೆ ವಿವರಿಸಿದರು.<br><br>ಈ ಹಿನ್ನಲೆಯಲ್ಲಿ ವಿಶ್ವವಿದ್ಯಾಲಯವು ದಿನಾಂಕ:07.06.2024 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ, 2024–25ನೇ ಶೈಕ್ಷಣಿಕ ವರ್ಷದಲ್ಲಿ ಸ್ನಾತಕ ಪದವಿಗಳಾದ B.A, B.Com, B.Sc, BBA & BCA ಗಳಿಗೆ ರಾಯಚೂರು ವಿಶ್ವವಿದ್ಯಾಲಯದ NEP ಪರಿಸ್ಕೃತ ಪಠ್ಯಕ್ರಮವನ್ನು ರಚಿಸುವ ಸಂಬಂಧ ಒಂದು ಸಮಿತಿಯನ್ನು ರಚಿಸಲು ಚರ್ಚಿಸಲಾಯಿತು. ಸಭೆಯಲ್ಲಿ ಚರ್ಚಿಸಿದಂತೆ ಮಾನ್ಯ ಕುಲಪತಿಗಳು, ಕುಲಸಚಿವರು(ಮೌಲ್ಯಮಾಪನ) ಇವರನ್ನು ಸಮಿತಿ ಅಧ್ಯಕ್ಷರನ್ನಾಗಿ ನೇಮಕ ಮಾಡಿ, ಸಭೆಗಳನ್ನು ನಡೆಸಲು ನಿರ್ಧರಿಸಿ, ಆದೇಶಿಸಿದರು.<br><br>ಮುಂದುವರೆದು, NEP ಪರಿಸ್ಕೃತ ಪಠ್ಯಕ್ರಮವನ್ನು ಅನುಷ್ಠಾನಗೊಳಿಸಲು ಸಮಿತಿಯ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರಗಳ ವರದಿಯನ್ನು ಕಲಾ ಮತ್ತು ವಾಣಿಜ್ಯ ನಿಕಾಯದ ಡೀನರಾದ ಪ್ರೊ.ಪಿ.ಭಾಸ್ಕರ್ ಅವರು ಸಿಂಡಿಕೇಟ್ ಸಭೆಗೆ ವಿವರಿಸಿದರು.<br><br>ಸಿಂಡಿಕೇಟ್ ಸಭೆಯು ಸರ್ಕಾರದ ಆದೇಶ, ರಾಜ್ಯ ಶಿಕ್ಷಣ ನೀತಿಯಲ್ಲಿ ಸೂಚಿಸಿರುವ ಮಾರ್ಗಸೂಚಿಗಳು ಹಾಗೂ NEP ಪರಿಸ್ಕೃತ ಪಠ್ಯಕ್ರಮವನ್ನು ಅನುಷ್ಠಾನಗೊಳಿಸಲು ಸಮಿತಿಯ ವರದಿಯನುಸಾರ ಹೊಸ ಪಠ್ಯಕ್ರಮವನ್ನು 2024–25ನೇ ಶೈಕ್ಷಣಿಕ ಸಾಲಿನಿಂದ ಅಳವಡಿಸಿಕೊಳ್ಳುವುದು ಮತ್ತು ಪಠ್ಯಕ್ರಮ ರಚನೆಗೆ ಸಂಬಂಧಪಟ್ಟ ಕಾರ್ಯಗಳನ್ನು ನೆರವೇರಿಸಲು ಸಭೆಯು ಸರ್ವಾನುಮತದಿಂದ ಸಮ್ಮತಿಸಿ, ರಾಜ್ಯ ಸರ್ಕಾದ ಆದೇಶದ ಪ್ರಕಾರ ಅನುಷ್ಠಾನಗೊಳಿಸಲು ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಿ, ಅನುಮೋದಿಸಲಾಯಿತು. |

15/6/24

**(ಪ್ರೊ.ವಿಶ್ವನಾಥ ಎಂ.)**
**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು**
**ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.**

15-6-2024.

**(ಪ್ರೊ.ಹರೀಶ್ ರಾಮಸ್ವಾಮಿ)**
**ಕುಲಪತಿಗಳು ಹಾಗೂ ಅಧ್ಯಕ್ಷರು**
**ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.**